# ಬೌದ್ಧ ಬಿಕ್ಕು ಮತ್ತು ದೇವರಗುಡ್ಡರ ದೀಕ್ಷೆಯ ವಿಧಾನಗಳ ಅವಲೋಕನ

**ಗುಂಡಣ್ಣ ಪಿ.**

ಸಂಶೋಧನಾರ್ಥಿ, ಕನ್ನಡ ಅಧ್ಯಯನ ಕೇಂದ್ರ, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು.

DOI: https://doi.org/10.5281/zenodo.15344335

## ABSTRACT:

ಯಾವುದೇ ಒಂದು ಮತ, ಧರ್ಮದ ಅಸ್ತಿತ್ವ ಉಳಿದಿರುವುದು ಅದನ್ನು ಅನುಸರಿಸುವ ಪರಂಪರೆಯಿಂದ ಪರಂಪರೆಗೆ ಸಾಗಿಸುವ ಅನುಯಾಯಿಗಳ ಮೇಲೆ. ಇವರ ಬಗ್ಗೆ ತಿಳಿದುಕೊಳ್ಳದೆ ಮತ, ಧರ್ಮಗಳ ಸತ್ವವನ್ನು ಗ್ರಹಿಸಲಾಗುವುದಿಲ್ಲ. ಮೌಖಿಕ ಪರಂಪರೆಯಲ್ಲಿ ಸಾಗಿ ಬಂದಿರುವ ಕಥನ, ಕಾವ್ಯ, ಲಾವಣಿ ಮೊದಲಾದವುಗಳು ಕಾಲಾನಂತರದಲ್ಲಿ ಭಿನ್ನ ಪ್ರದೇಶ, ಸಂದರ್ಭಗಳಲ್ಲಿ ಮಾರ್ಪಾಟುಗೊಂಡು ಮೂಲದಲ್ಲಿ ಇಲ್ಲದ ವಿಷಯಾಂಶಗಳನ್ನು, ಘಟನೆಗಳನ್ನು ಸೇರಿಸಿ ರೂಪುಗೊಂಡಿರುವ ಸಾಧ್ಯತೆ ದಟ್ಟವಾಗಿದೆ. ಆದರೆ ನಿಯಮ, ಆಚರಣೆಗಳು ಎಷ್ಟೇ ತಲೆಮಾರುಗಳು ದಾಟಿ ಬಂದರು ಹೆಚ್ಚು ಬದಲಾವಣೆಗೊಳಿಸದೆ ಅನುಸರಿಸಲಾಗಿರುತ್ತದೆ. ಮಂಟೇಸ್ವಾಮಿ, ಸಿದ್ದಪ್ಪಾಜಿ ಜಾತ್ರೆಗಳಲ್ಲಿ ಮಾಂಸಹಾರ, ಭಂಗಿ ಸೇವನೆಯ ಪದ್ದತಿ ಇದೆ. ಮಲೆಯ ಮಾದಯ್ಯನ ನೆಲೆಯಲ್ಲಿ ಹೆಣ್ಣು ಗಂಡಿನ ಸಂಬಂಧಕ್ಕಾಗಲಿ, ಮಾಂಸ-ಮದ್ಯಗಳ ಸೇವನೆಗಾಗಲಿ ಅವಕಾಶವಿಲ್ಲ. ವಿರಕ್ತಿ ಮತ್ತು ಭಕ್ತಿಯೇ ಭಕ್ತರ ಮೂಲ ನಿಯಮ. ಮಾದಯ್ಯನ ಅನುಯಾಯಿಗಳಾದ ದೇವರಗುಡ್ಡರು ಪಡೆಯುವ ದೀಕ್ಷಾ ಪದ್ದತಿ ಅಹಿಂಸೆ ಮತ್ತು ಶಾಂತಿಯ ಜೀವನವನ್ನು, ಸೌಹಾರ್ದ ಬದುಕನ್ನು, ಅಹಂಕಾರವಿಲ್ಲದೆ ಭಿಕ್ಷೆ ಬೇಡಿ ಹಂಚಿ ತನ್ನುವುದನ್ನು ತಿಳಿಸುತ್ತದೆ. ಇದು ಬೌದ್ಧ ಬಿಕ್ಕುಗಳು ಅನುಸರಿಸುವ ದೀಕ್ಷಾ ನಿಯಮಗಳಿಗೆ ಪೂರಕ ಸಂಬಂಧವನ್ನು ಹೊಂದಿದೆ.

## KEYWORDS:

ದೀಕ್ಷೆ, ಬಿಕ್ಕು, ದೇವರಗುಡ್ಡ, ಬುದ್ಧ, ಮಲೆಮಾದೇಶ್ವರ, ಭಿಕ್ಷಾಟನೆ, ವಿನಯ ಪಿಟಿಕ, ಉಪಾಸಕ.

ದೀಕ್ಷೆ ಎಂಬುದು ಸಂಸ್ಕೃತದ ದೀಕ್ಷಾ ಎಂಬ ಪದದಿಂದ ಬಂದಿದೆ. 'ದಿ' ಎಂದರೆ ಕೊಡುವುದು 'ಇಕ್ಷಾ' ಎಂದರೆ ದೃಷ್ಟಿ. ಗುರು ತನ್ನ ಶಿಷ್ಯನಿಗೆ ಜೀವನ ಮಾರ್ಗಕ್ಕೆ ಬೆಳಕಿನ ದೃಷ್ಟಿ ಅಥವಾ ಜ್ಞಾನವನ್ನು ಕೊಡುವುದೇ ದೀಕ್ಷೆ. ಒಂದು ಪರಂಪರೆಯ ಜ್ಞಾನ, ಆದರ್ಶ ಮುಂದುವರಿಯಲು ಈ ದೀಕ್ಷಾ ಕಾರ್ಯ ಅತ್ಯಗತ್ಯವಾಗಿದೆ.

ಅಸ್ತಿತ್ವದ ಒಂದು ಸ್ಥಿತಿಯಿಂದ ಮತ್ತೊಂದು ಸ್ಥಿತಿಗೆ ಧಾರ್ಮಿಕ ರೀತಿಯ ಸ್ಥಿತ್ಯಂತರ. ಈ ಸ್ಥಿತ್ಯಂತರವನ್ನು ಸೂಚಿಸಲು ಮತ್ತು ಜರಗುವಂತೆ ಮಾಡಲು ಕೆಲವು ವಿಧಿ, ಪರೀಕ್ಷೆ, ಕಠಿಣ ಪರೀಕ್ಷೆ ಇತ್ಯಾದಿಗಳನ್ನು ವಿಧಿಸಬಹುದು. ಕೆಲವೊಮ್ಮೆ ವ್ಯಕ್ತಿಯೇ ಸ್ವ ಇಚ್ಛೆಯಿಂದ ಇವುಗಳಿಗೆ ಒಳಗಾಗಬಹುದು. ಈ ಸ್ಥಿತ್ಯಂತರ ಪ್ರೌಢಾವಸ್ಥೆಯಿಂದ ಪ್ರಬುದ್ಧಾವಸ್ಥೆಗೆ, ಸದಸ್ಯತ್ವರಾಹಿತ್ಯದಿಂದ ಒಂದು ಕುಲದ, ಧಾರ್ಮಿಕ ಮತದ, ರಹಸ್ಯ ಸಮಾಜದ ಸದಸ್ಯತ್ವಕ್ಕೆ ವಿಶೇಷ ಪಾವಿತ್ರ್ಯ ಸ್ಥಿತಿಗೆ ಪ್ರವೇಶ ಪಡೆಯುವುದಾಗಿದೆ. ದೀಕ್ಷೆ ನೀಡುವ ಗುರು ದೀಕ್ಷೆಗೆ ಒಳಪಡುವವನ ಸ್ಥೈರ್ಯ, ತಾಳ್ಮೆ ದೃಢಚಿತ್ತವನ್ನು ನಾನಾ ರೀತಿಯಲ್ಲಿ ಅರಿತು ಅದಕ್ಕೆ ಬೇಕಾದ ಅರ್ಹತೆ ಸಾಮರ್ಥ್ಯ ಅವನಲ್ಲಿ ಕಂಡು ಬಂದರೆ ದೀಕ್ಷೆಯನ್ನು ನೀಡುತ್ತಾನೆ. ಕೆಲವು ಮತಗಳಲ್ಲಿ ಭಯಂಕರವೆನಿಸುವ ಪರೀಕ್ಷೆಗಳನ್ನು ದೀಕ್ಷಾಬದ್ಧನಾಗಲಿರುವ ವ್ಯಕ್ತಿಗೆ ಒಡ್ಡಿ, ತನ್ನ ಹೊಸ ಸ್ಥಾನಮಾನದ ಹಕ್ಕುಗಳಲ್ಲಿ ಪಾಲ್ಗೊಳ್ಳುವ ಸಾಮರ್ಥ್ಯವಿದೆಯೇ ಎಂಬುದನ್ನು ನಿರೀಕ್ಷಿಸುತ್ತವೆ. ಇದರ ಜೊತೆಯಲ್ಲಿ ಆತನ ಹೊಸ ಜವಾಬ್ದಾರಿಗಳನ್ನು ಕುರಿತು ತಿಳುವಳಿಕೆಯನ್ನು ಉಪದೇಶಿಸಲಾಗುತ್ತದೆ. ಮತದ ಚರಿತ್ರೆ, ರಹಸ್ಯಗಳನ್ನು ಆದರ್ಶಗಳನ್ನು, ನಿಯಮಗಳನ್ನು ಬೋಧಿಸಲಾಗುತ್ತದೆ. ಲಕ್ಷಣಗಳು, ಲಾಂಛನಗಳು ಮತ್ತು ಬಿರುದುಗಳನ್ನು ವಿಧಿವತ್ತಾಗಿ ವಹಿಸಿಕೊಡಲಾಗುತ್ತದೆ. ಬಹಳಷ್ಟು ಸಮಾಜಗಳಲ್ಲಿ ದೀಕ್ಷಾ ವಿಧಿ, ದೀಕ್ಷಬದ್ಧರಾದವರು ದೀಕ್ಷೆಗೆ ಒಳಗಾಗದವರೊಡನೆ ಬೆರೆಯುವುದನ್ನು ಪ್ರತಿಬಂಧಿಸುತ್ತದೆ. ಈ ದೀಕ್ಷಾ ವಿಧಾನವು ಕೆಲವು ಮತ, ಧರ್ಮಗಳಲ್ಲಿ ಮೌಖಿಕವಾಗಿಯೂ, ಗ್ರಂಥಾಸ್ಥ ದಾಖಲಿತ ವಿಧಾನದಲ್ಲಿಯೂ ನಡೆಯುತ್ತದೆ. ದೀಕ್ಷೆಯನ್ನು ಪಡೆದ ನಂತರ ಆ ವ್ಯಕ್ತಿಯು ಆ ಮತ, ಧರ್ಮ, ಪಂಥದ ಅನುಯಾಯಿಯಾಗಿ ಅದರ ಪ್ರತಿನಿಧಿಯಂತೆ ಕಾಣಿಸಿಕೊಳ್ಳುತ್ತಾನೆ.

**ಬೌದ್ಧ ಬಿಕ್ಕುಗಳ ದೀಕ್ಷಾ ವಿಧಾನಗಳು:**

ಭಾರತದ ಧಾರ್ಮಿಕ ಇತಿಹಾಸದಲ್ಲಿ ಮೊದಲಿಗೆ ಒಂದು ವ್ಯವಸ್ಥಿತ ರೂಪದಲ್ಲಿ ಸಂಘವೊಂದನ್ನು ಸ್ಥಾಪಿಸಿ ನಿಯಮಗಳನ್ನು ರೂಪಿಸಿದವನು ಗೌತಮ ಬುದ್ಧ. ಸ್ವತಃ ಬುದ್ಧನೇ ತನ್ನ ಅನುಯಾಯಿಗಳಿಗೆ ಧಮ್ಮ ದೀಕ್ಷೆಯನ್ನು ಬೋಧಿಸಿ, ಬಿಕ್ಕುಗಳ ಸಂಘವನ್ನು ಸ್ಥಾಪಿಸಿದ್ದಾನೆ. ಬೌದ್ಧ ಗ್ರಂಥವಾದ ವಿನಯ ಪಿಟಿಕದಲ್ಲಿ ಬಿಕ್ಕು ಮತ್ತು

ಅವನ ಆಚರಣೆಯ ಬಗ್ಗೆ ವಿಸ್ತಾರವಾಗಿ ತಿಳಿಸಲಾಗಿದೆ.

ಬುದ್ಧನ ಅನುಯಾಯಿಗಳನ್ನು ಎರಡು ವರ್ಗಗಳಾಗಿ ಗುರುತಿಸಬಹುದು. ಬಿಕ್ಕುಗಳದ್ದು ಒಂದು ವರ್ಗವಾದರೆ ಉಪಾಸಕರೆಂದು ಕರೆಯಲ್ಪಡುವ ಸಾಧಾರಣ ಅನುಯಾಯಿಗಳದ್ದು ಮತ್ತೊಂದು ವರ್ಗ. ಬೌದ್ಧ ಭಿಕ್ಷುವು ಮೂಲತಹ ಒಬ್ಬ ಪರಿವ್ರಾಜಕ. ಪರಿವ್ರಾಜಕ ವ್ಯವಸ್ಥೆಯು ಬೌದ್ಧ ಬಿಕ್ಷುಗಳ ವ್ಯವಸ್ಥೆಗಿಂತ ಹಳೆಯದು. ಇವರು ಗೃಹಸ್ಥ ಜೀವನವನ್ನು ತ್ಯಜಿಸಿದವರು ಹಾಗೂ ನೆಲೆ ಇಲ್ಲದೆ ತಿರುಗಾಡುವವರಾಗಿದ್ದು ಇವರಿಗೆ ಸಂಘವಿರಲಿಲ್ಲ. ಯಾವುದೇ ರೀತಿಯ ಶಿಸ್ತಿನ ನಿಯಮಗಳಿರಲಿಲ್ಲ. ಮೊದಲ ಬಾರಿಗೆ ಬುದ್ಧನು ತನ್ನ ಅನುಯಾಯಿಗಳಿಗೆ ಒಂದು ಸಂಘವನ್ನು ಸ್ಥಾಪಿಸಿ, ಅವರಿಗೆ ಕೆಲವು ನಿಯಮಗಳನ್ನು ಬೋಧಿಸಿ, ಆದರ್ಶವನಿಟ್ಟು ಅದನ್ನು ಅನುಸರಿಸಿ ಸಾಕ್ಷಾತ್ಕರಿಸಿಕೊಳ್ಳುವಂತೆ ತಿಳಿಸಿದನು.

ಮೊದಲ ಸಂಸ್ಕಾರವನ್ನು ಪ್ರವ್ರಜ್ಯ (ಪಬ್ಬಜ್ಜಾ ), 'ಮನೆಯಿಂದ ಹೊರಡುವುದು' ಎಂದು ಕರೆಯಲಾಗುತ್ತಿತ್ತು. ಈ ಮೊದಲ ಹಂತದ ಸನ್ಯಾಸತ್ವಕ್ಕೆ ಪ್ರವೇಶ ಪಡೆದ ವ್ಯಕ್ತಿಗಳನ್ನು ಶ್ರಾಮನೇರ (ಸಮನೇರ), 'ನವಶಿಷ್ಯರು' ಎಂದು ಕರೆಯಲಾಗುತ್ತಿತ್ತು, ಅದರೂ ಅವರನ್ನು 'ಹೊಸ' ಅಥವಾ 'ಕಿರಿಯ ಸನ್ಯಾಸಿಗಳು' (ನವಕೋ ಭಿಕ್ಷು) ಎಂದೂ ಕರೆಯಲಾಗುತ್ತಿತ್ತು. ಯಾವುದೇ ಔಪಚಾರಿಕ ಸಭೆಗೆ ಹಾಜರಾಗದೆ ಹಿರಿಯ ಸನ್ಯಾಸಿಗಳು ಅವರನ್ನು ಅವರ ಪೋಷಕರ ಅನುಮತಿ ಪಡೆದು ಸೇರಿಸಿಕೊಳ್ಳಬಹುದು. ತಂದೆ ಮತ್ತು ತಾಯಿಯ ಅನುಮತಿಯಿಲ್ಲದೆ ಮಗನ ಮೇಲೆ ಪಬ್ಬಜ್ಜವನ್ನು ಮಾಡಬಾರದು. ನವಶಿಷ್ಯರ ಪ್ರವೇಶ ಸಮಾರಂಭದಲ್ಲಿ ಮೊದಲು ತನ್ನ ಕೂದಲನ್ನು ಕತ್ತರಿಸಿ, ಮೂರು ಹಳದಿ ಬಣ್ಣದ ಹರಿದ ಬಟ್ಟೆಗಳನ್ನು (ತ್ರಿ–ಚಿವರ) ಧರಿಸಿ, ಬಲ ಭುಜವನ್ನು ಖಾಲಿಯಾಗಿ ಬಿಡುವಂತೆ ಮೇಲಿನ ನಿಲುವಂಗಿಯನ್ನು ಸರಿಪಡಿಸಿ, ನಂತರ ಒಬ್ಬ ಭಂತೆಯು ಮೂರು ಬಾರಿ ಮೂರು–ಆಶ್ರಯ ಸೂತ್ರವನ್ನು ಪುನರಾವರ್ತಿಸುವ ಮೊದಲು:

**ನಾನು ಬುದ್ಧನಿಗೆ ಆಶ್ರಯ ಪಡೆಯುತ್ತೇನೆ (ಬುದ್ಧಂ ಶರಣಂ ಗಚ್ಛಾಮಿ).**

**ನಾನು ಕಾನೂನಿಗೆ ಆಶ್ರಯ ಪಡೆಯುತ್ತೇನೆ (ಧರ್ಮಂ ಶರಣಂ ಗಚ್ಛಾಮಿ).**

**ನಾನು ಆದೇಶಕ್ಕೆ ಆಶ್ರಯ ಪಡೆಯುತ್ತೇನೆ (ಸಂಘಂ ಶರಣಂ ಗಚ್ಛಾಮಿ).**

ಬೌದ್ಧ ನವಶಿಷ್ಯರು ಬ್ರಹ್ಮ–ಚಾರಿಯ ಪವಿತ್ರ ಹಗ್ಗದ (ಉಪವೀತ) ಹಕ್ಕನ್ನು ಹೊಂದಿದ್ದರೆ, ಇದನ್ನು ಬಹುಶಃ ಪ್ರವೇಶದ ಸಮಯದಲ್ಲಿ ಕೈಬಿಡಲಾಯಿತು. ನಂತರ ಅವನಿಗೆ ಹತ್ತು ಆಜ್ಞೆಗಳಲ್ಲಿ (ದಾಸ–ಶೀಲ ಅಥವಾ ಶಿಖಾ–ಪಾದ) ಸೂಚನೆ ನೀಡಲಾಯಿತು, ಅವು ನಿಜವಾಗಿಯೂ ಹತ್ತು ನಿಷೇಧಗಳಾಗಿವೆ. ಹತ್ತು ಇಂದ್ರಿಯನಿಗ್ರಹಗಳನ್ನು ಬಯಸುತ್ತವೆ (ವೇರಮಣಿ):–1. ಜೀವನವನ್ನು

ನಾಶಮಾಡುವುದರಿಂದ (ಪಾಣಾತಿಪತೋ=ಪ್ರಾಣಾತಿಪಾತ); 2. ನೀಡದ ಯಾವುದನ್ನಾದರೂ ತೆಗೆದುಕೊಳ್ಳುವುದರಿಂದ (ಅದಿನ್ನಾದಾನ)3. ಅನೈತಿಕತೆಯಿಂದ (ಅಬ್ರಹ್ಮಚಾರಿಯಾ) 4. ಸುಳ್ಳು ಮಾತನಾಡುವುದರಿಂದ (ಮೂಸಾ–ವಾದ = ಮೃಷಾ–ವಾದ) 5. ಬಲವಾದ ಪಾನೀಯಗಳನ್ನು ಕುಡಿಯುವುದರಿಂದ (ಸುರಾ) 6. ನಿಷೇಧಿತ ಸಮಯದಲ್ಲಿ ತಿನ್ನುವುದರಿಂದ (ವಿಕಲ–ಭೋಜನ) 7. ನೃತ್ಯ, ಹಾಡುಗಾರಿಕೆ, ಸಂಗೀತ ಮತ್ತು ಲೌಕಿಕ ಪ್ರದರ್ಶನಗಳಿಂದ (ವಿಶುಕ) 8. ಹೂಮಾಲೆಗಳು, ಸುಗಂಧ ದ್ರವ್ಯಗಳು, ಗಂಧಕಗಳು ಅಥವಾ ಆಭರಣಗಳಿಂದ 9. ಎತ್ತರದ ಅಥವಾ ಅಗಲವಾದ ಹಾಸಿಗೆಯ ಬಳಕೆಯಿಂದ 10. ಚಿನ್ನ ಅಥವಾ ಬೆಳ್ಳಿಯನ್ನು ಸ್ವೀಕರಿಸುವುದರಿಂದ, ಧಾರ್ಮಿಕ ಬೋಧನೆ ಅಥವಾ ಯಾವುದೇ ಆಧ್ಯಾತ್ಮಿಕ ಪ್ರಯೋಜನಗಳನ್ನು ನೀಡಲಾಗಿದ್ದರೂ ಸಹ ಹಣವನ್ನು ಪಡೆಯದಿರುವ ನಿಷೇಧವು ಅತ್ಯಂತ ಮುಖ್ಯವೆಂದು ಪರಿಗಣಿಸಲ್ಪಟ್ಟಿತು.

ಸಂಘದ ಬಾಗಿಲು ಎಲ್ಲರಿಗೂ ತೆರೆದಿತ್ತು ಇಲ್ಲಿ ಯಾವುದೇ ಜಾತಿ, ಲಿಂಗ, ಅಂತಸ್ತಿನ ಮೇಲೆ ಯೋಗ್ಯತೆಯನ್ನು ನಿರ್ಧರಿಸದೆ ಎಲ್ಲರನ್ನೂ ಸಮಾನವಾಗಿ ನೋಡಲಾಗುತ್ತಿತ್ತು. ಬುದ್ಧನೇ ಹೇಳಿದಂತೆ ಸಂಘವು ಒಂದು ಸಮುದ್ರವಿದ್ದಂತೆ, ಭಿಕ್ಷುಗಳು ಸಮುದ್ರದಲ್ಲಿ ಬಂದು ಸೇರುವ ನದಿಗಳಂತೆ. ನದಿಗಳಿಗೆ ಪೂರ್ವದಲ್ಲಿ ತನ್ನದೇ ಆದ ಹೆಸರು ಅಸ್ತಿತ್ವಗಳಿದ್ದರೂ ಒಮ್ಮೆ ಸಮುದ್ರವನ್ನು ಪ್ರವೇಶಿಸಿತೆಂದರೆ ಅದು ತನ್ನ ಪ್ರತ್ಯೇಕ ಹೆಸರನ್ನು, ಪ್ರತ್ಯೇಕ ಅಸ್ತಿತ್ವವನ್ನು ಕಳೆದುಕೊಳ್ಳುತ್ತದೆ. ಸಂಘಕ್ಕೆ ಸೇರಿದ ಮೇಲೆ ತನ್ನ ಮೂಲ ಅಸ್ತಿತ್ವವನ್ನು ಕಳೆದುಕೊಂಡು ಎಲ್ಲರಲ್ಲಿ ಒಂದಾಗುತ್ತಾನೆ. ಬುದ್ಧರ ಮೊದಲ ಶಿಷ್ಯರಾದ ತ್ರಪುಷ, ಭಲ್ಲುಕ ಎಂಬುವವರು ವ್ಯಾಪಾರಿಗಳು, ಉರುವೇಲದಲ್ಲಿ ಆತನ ಶಿಷ್ಯರಾದವರು ಬ್ರಾಹ್ಮಣರು, ಆನಂದ, ದೇವದತ್ತರು ಕ್ಷತ್ರೀಯರು, ಬಿಂಬಸಾರ, ಪ್ರಸೇನಜಿತ ರಾಜರು. ಸುನೀಧ, ವರ್ಷಕಾರ, ಸಿಂಹ ಸೇನಾಧಿಪತಿಗಳು. ಪೂರ್ಣಾ, ಪೂರ್ಣಿಕಾ ಎಂಬುವವರು ಗುಲಾಮರ ಹೆಂಗಸರು. ಚುಂದ ಕಮ್ಮಾರ, ಅಂಗುಳಿಮಾಲ ಕೊಲೆಗಾರ, ಆಮ್ರಪಾಲಿ ವೇಶ್ಯೆ, ಉಪಾಲಿ ಕ್ಷೌರಿಕ, ಸುನೀತ ಜಲಗಾರ.

ಸಂಘದಲ್ಲಿ ಗಮನಿಸುತ್ತಿದ್ದ ಒಂದೇ ಭೇದವೆಂದರೆ ಲಿಂಗ ಭೇದ. ಭಿಕ್ಷುಗಳ ಸಂಘವು ಭಿಕ್ಷುಣಿಯರ ಸಂಘದಿಂದ ವ್ಯವಸ್ಥೆಯಲ್ಲಿ ಬೇರೆಯಾಗಿತ್ತು. ಭಿಕ್ಷು ಸ್ಥಿತಿಯನ್ನು ಎರಡು ಹಂತಗಳಲ್ಲಿ ತಲುಪಬೇಕು. ಮೊದಲನೆಯ ಹಂತವನ್ನು ಪರಿವ್ರಜವೆಂದು, ಎರಡನೆಯ ಹಂತವನ್ನು ಉಪಸಂಪದವೆಂದು ಕರೆಯಲಾಗುತ್ತದೆ. ಉಪಸಂಪದದ ನಂತರ ಅವನು ಭಿಕ್ಷುವಾಗುತ್ತಾನೆ. ಪರಿವ್ರಜವನ್ನು ಸ್ವೀಕರಿಸಿ ಕೊನೆಯಲ್ಲಿ ಭಿಕ್ಷುವಾಗಬೇಕೆಂಬ ಉದ್ದೇಶವನ್ನುಳ್ಳ ವ್ಯಕ್ತಿಯು ಮೊದಲು ಉಪಾಧ್ಯನಾಗಲು ಅಧಿಕಾರವುಳ್ಳ ಒಬ್ಬ ಭಿಕ್ಷವನ್ನು ಹುಡುಕಿಕೊಳ್ಳಬೇಕು. ಕನಿಷ್ಠ 10 ವರ್ಷಗಳು ಭಿಕ್ಷು ಜೀವನವನ್ನು ಕಳೆದ ನಂತರವಷ್ಟೇ ಭಿಕ್ಷುವು ಉಪಾಧ್ಯನಾಗಬಹುದು. ಉಪಾಧ್ಯ ಸ್ವೀಕರಿಸಿದಂತ ಸಾಧಕನನ್ನು ಪರಿವ್ರಜಕನೆಂದು ಕರೆಯಲಾಗುತ್ತದೆ. ಆ ಸಾಧಕನು ಆ

ಉಪಾಧ್ಯನ ಸೇವೆ ಹಾಗೂ ಮಾರ್ಗದರ್ಶನದಲ್ಲಿ ಇರಬೇಕು. ಈ ಮಾರ್ಗದರ್ಶನ ಮುಗಿದ ಮೇಲೆ ಉಪಸಂಪದಕೆಂದೆ ವಿಶೇಷವಾಗಿ ಕರೆದ ಸಂಘದ ಸಭೆಯಲ್ಲಿ ಆ ಉಪಾಧ್ಯನೆ ತನ್ನ ಶಿಷ್ಯನ ಹೆಸರನ್ನು ಸೂಚಿಸಬೇಕು ಹಾಗೂ ಆ ಶಿಷ್ಯನು ತನಗೆ ಉಪಸಂಪದವನ್ನು ನೀಡಬೇಕೆಂದು ಸಂಘವನ್ನು ವಿನಂತಿಸಿಕೊಳ್ಳಬೇಕು. ಅವನು ಭಿಕ್ಷುವಾಗಲೂ ಯೋಗ್ಯನು ಸರಿಯಾದವನು ಆಗಿದ್ದಾನೆಂದು ಸಂಘಕ್ಕೆ ವಿಶ್ವಾಸ ಮೂಡಬೇಕು. ಈ ಉದ್ದೇಶಕ್ಕಾಗಿ ಒಂದು ಪ್ರಶ್ನಾವಳಿ ಇರುತ್ತದೆ ಮತ್ತು ಸಾಧಕನು ಅವುಗಳನ್ನು ಉತ್ತರಿಸಬೇಕು. ಸಂಘವು ಅನುಮತಿ ಕೊಟ್ಟ ನಂತರವೇ ಅವನಿಗೆ ಉಪಸಂಪದವನ್ನು ನೀಡಬೇಕಾಗುತ್ತದೆ. ಆಗ ಆ ವ್ಯಕ್ತಿ ಭಿಕ್ಷುವಾಗುತ್ತಾನೆ. ಭಿಕ್ಷುಣಿಯರ ಸಂಘಕ್ಕೆ ಪ್ರವೇಶವನ್ನು ನಿರ್ಧರಿಸುವ ನಿಯಮಗಳು ಹೆಚ್ಚು ಕಡಿಮೆ ಭಿಕ್ಷುಗಳ ಸಂಘಕ್ಕೆ ಪ್ರವೇಶವನ್ನು ನಿರ್ಧರಿಸುವ ನಿಯಮಗಳೇ ಆಗಿವೆ.

ಯಾವ ಭಿಕ್ಷುವು ಈ ಕೆಳಗಿನ ಎಂಟು ವಸ್ತುಗಳನ್ನು ಬಿಟ್ಟು ಮತ್ತೇನು ಇಟ್ಟುಕೊಳ್ಳಬಾರದು.

ಮೈ ಮುಚ್ಚಲು ಮೂರು ಬಟ್ಟೆಗಳು ಅವೆಂದರೆ, ಅಂತರ ವಸ್ತ್ರ ಎಂಬ ಒಳ ಉಡುಪು, ಉತ್ತರ ಸಂಗ ಎಂಬ ಹೊರ ಉಡುಪು, ಸಂಗತಿ ಎಂಬ ಚಳಿಯಿಂದ ರಕ್ಷಿಸುವ ಮೇಲುಡುಪು, ಲಂಗೋಟಿ, ಬಿಕ್ಷಾ ಪಾತ್ರೆ, ಕ್ಷೌರದ ಕತ್ತಿ, ಸೂಜಿ, ಕಮಂಡಲ. ಭಿಕ್ಷುವು ಭಿಕ್ಷಾಟನೆಯಿಂದಲೇ ಆಹಾರ ಪಡೆಯಬೇಕು, ಭಿಕ್ಷಾಟನೆಯಿಂದಲೇ ಬದುಕಬೇಕು. ದಿನಕ್ಕೆ ಒಂದು ಹೊತ್ತು ಊಟ ಮಾಡಿ ಜೀವಿಸಬೇಕು. ಸಂಘಕ್ಕಾಗಿಯೇ ಕಟ್ಟಿಸಿದ ವಿಹಾರ ಇಲ್ಲದಿದ್ದರೆ ಅವನು ಮರದಡಿಯಲ್ಲಿ ಜೀವಿಸಬೇಕು. ಭಿಕ್ಷು ತಾನು ಮಾಡಿದ ಪ್ರತಿಜ್ಞೆಗಳನ್ನು ಉಲ್ಲಂಘಿಸಿದರೆ ಪರಾಜಿಕ ಎಂಬ ಅಪರಾಧವಾಗುತ್ತದೆ. ಪರಾಜಿಕ ಮಾಡಿದವನನ್ನು ಸಂಘದಿಂದ ಹೊರಹಾಕಲಾಗುವುದು. ವಿನಯ ಪಿಟಕದಲ್ಲಿ ಸೇರಿಸಲಾಗಿರುವ ದುರಾಚಾರಗಳ ಪಟ್ಟಿಯಲ್ಲಿ ಅಂತಹ ಹದಿಮೂರಿವೆ ಅವು ಪರಾಜಿಕಕ್ಕೆ ಸಂಬಂಧಿಸಿದೆ. ನಿಯಮಗಳ ಉಲ್ಲಂಘನೆಗೆ ವಿಧಿಸಲಾಗುವ ಶಿಕ್ಷೆ ಎಂದರೆ ಪುನರ್ವಶ (ನಿಸರ್ಗೀಯ) ಮತ್ತು ಪಾಶ್ಚಾತ್ತಾಪ (ಪಚಿತ್ತೀಯ) ವ್ಯಕ್ತಪಡಿಸಬೇಕು.

**ಬಿಕ್ಕು ಮತ್ತು ತಪ್ಪೊಪ್ಪಿಗೆ ವಿಧಾನ:**

ತಪ್ಪೊಪ್ಪಿಗೆಯು (ಪ್ರತಿಮೋಕ್ಷ) ನಿಯಮಗಳ ಉಲ್ಲಂಘನೆಗೆ ಮಾತ್ರ ಸೀಮಿತವಾಗಿತ್ತು. ತಪ್ಪೊಪ್ಪಿಗೆ ನಡೆಯಬೇಕಾದರೆ ನಿರ್ದಿಷ್ಟ ಸ್ಥಳದ ಬಿಕ್ಕುಗಳು ಸಭೆ ಸೇರಬೇಕಾಗುತ್ತಿತ್ತು. ಚತುರ್ದಶಿ, ಪಂಚದಶಿ ಮತ್ತು ಅಷ್ಟಮಿ ಹೀಗೆ ಒಂದೇ ಪಕ್ಷದ ಮೂರು ದಿನಗಳಂದು ಅಂತ ಸಭೆಗಳು ನಡೆಯಬೇಕಾಗಿತ್ತು. ಅಂತ ಸಭೆಗಳಂದು ಬಿಕ್ಕು ಉಪವಾಸ ಇರಬೇಕಾಗಿತ್ತು. ಅದಕ್ಕೆ ಅಂಥ ದಿನಗಳನ್ನು ಉಪೋಸಥ ಎಂದು ಕರೆಯಲಾಗುತ್ತದೆ. ಸಭೆಯಲ್ಲಿರುವ ಒಬ್ಬ ಬಿಕ್ಕು ಪ್ರತಿ ಮೋಕ್ಷದಲ್ಲಿರುವ ನಿಯಮಗಳನ್ನು

ಒಂದೊಂದಾಗಿ ಓದುತ್ತಾನೆ. ಓದಿದ ನಂತರ ಅವನು ಬಿಕ್ಕುಗಳ ಸಭೆಯನ್ನು ಉದ್ದೇಶಿಸಿ 'ನಮ್ಮಲ್ಲಿ ಯಾರೊಬ್ಬರೂ ಈ ನಿಯಮವನ್ನು ಉಲ್ಲಂಘಿಸಿ ಇಲ್ಲವೆಂದು ತಿಳಿಯುತ್ತಾನೆ, ಅದಕ್ಕೆ ನೀವು ಮೌನದಿಂದಿರಿ' ಎನ್ನುತ್ತಾನೆ. ಹೀಗೆ ಮೂರು ಸಾರಿ ಉಚ್ಛರಿಸುತ್ತಾನೆ. ಇದಾದ ಮೇಲೆ ಮುಂದಿನ ನಿಯಮಕ್ಕೆ ಹೋಗುತ್ತಾನೆ. ಇಂಥದ್ದೇ ತಪ್ಪೊಪ್ಪಿಗೆ ಸಭೆ ಬಿಕ್ಕುಣಿಯರ ಸಂಘದಲ್ಲೂ ಅಗತ್ಯವಾಗಿರುತ್ತದೆ. ತಪ್ಪೊಪ್ಪಿಗೆಯ ನಂತರ ಆರೋಪ ಮತ್ತು ವಿಚಾರಣೆ ಮುಂದುವರಿಯಬಹುದು. ಬಿಕ್ಕು ತಪ್ಪನ್ನು ಒಪ್ಪಿಕೊಳ್ಳದಿದ್ದರೆ ಆಗ ನಿಯಮ ಉಲ್ಲಂಘನೆಗೆ ಸಾಕ್ಷಿಯಾಗಿದ್ದ ಯಾವ ಬಿಕ್ಕುವಾದರೂ ಅಪರಾಧವನ್ನು ವರದಿ ಮಾಡಬಹುದು. ಆನಂತರ ಆರೋಪ ಮತ್ತು ವಿಚಾರಣೆ ಜರಗುತ್ತದೆ.

**ದೇವರ ಗುಡ್ಡದ ದೀಕ್ಷೆ ವಿಧಾನಗಳು:**

ಮಾದೇಶ್ವರನ ಕುರಿತಾದ ಜಾನಪದ ಕಾವ್ಯಗಳಲ್ಲಿ ಮಾದೇಶ್ವರನು ತನ್ನ ಪವಾಡಗಳ ಮೂಲಕ ಅನೇಕ ಜನರನ್ನು ತನ್ನ ಅನುಯಾಯಿಗಳನ್ನಾಗಿ, ಶಿಶು ಮಕ್ಕಳನ್ನಾಗಿ ಮಾಡಿಕೊಂಡು ಅವರಿಗೆ ದೀಕ್ಷೆಯನ್ನು ನೀಡಿದ್ದಾನೆ. ದೇವರ ಗುಡ್ಡ ನಿಗೆ ಮಾದೇಶ್ವರನ ಶಿಶು ಮಗ ಎಂದು ಕರೆಯುತ್ತಾರೆ. ಈ ರೀತಿಯ ಗುಡ್ಡನನ್ನು ಬಿಡುವ ಸಂಪ್ರದಾಯ 16ನೆಯ ಶತಮಾನದಿಂದೀಚೆಗೆ ಹುಟ್ಟಿಕೊಂಡಿರಬಹುದೆಂದು ವಿದ್ವಾಂಸರ ಅಭಿಪ್ರಾಯ. ವಂಶ ಪಾರಂಪರಿಯವಾಗಿ ಬಂದಂತೆ ಮನೆಗೆ ಒಬ್ಬನನ್ನು ಗುಡ್ಡನನ್ನಾಗಿ ಬಿಡುವ ಪದ್ಧತಿ, ಇಲ್ಲಿ ಕಂಡು ಬರುವ ವಿಶೇಷ. ಭಕ್ತರಿಗೆ ಕಷ್ಟ ಕಾರ್ಪಣ್ಯಗಳು ಬಂದರೆ ಅಥವಾ ಮಕ್ಕಳ ಫಲವಿಲ್ಲದಿದ್ದರೆ ಹುಟ್ಟಿದ ಮೊದಲನೆಯ ಮಗನನ್ನು ದೇವರ ಗುಡ್ಡನಾಗಿ ಬಿಡುತ್ತೇವೆ ಎಂದು ಹರಕೆ ಮಾಡಿಕೊಳ್ಳುತ್ತಾರೆ. ಅದರಂತೆ ಹುಟ್ಟಿದ ಮಗುವಿಗೆ 12ನೆಯ ವರ್ಷ ತುಂಬಿದ ಮೇಲೆ ಒಂದು ಶುಭದಿನ ಕೆಲವರು ಸಂಸ್ಕಾರಗಳೊಡನೆ ಗುಡ್ಡನನ್ನಾಗಿ ಮಾಡುವ ಕಾರ್ಯವನ್ನು ಏರ್ಪಡಿಸಲಾಗುವುದು. ಸಾಮಾನ್ಯವಾಗಿ ಸೋಮವಾರ ಅಥವಾ ಶುಕ್ರವಾರ ಗುಡ್ಡದ ಮುಖ್ಯಸ್ಥನಾದ ಪುರಸೇಕಾರಿಯ ಸಮಕ್ಷಮದಲ್ಲಿ ಗುಡ್ಡನಾಗುವ ಹುಡುಗನಿಗೆ ದೀಕ್ಷೆಯನ್ನು ಕೊಡುವ ಸಮಾರಂಭ ಜರುಗುವುದು. ಸಾಲೂರು ಮಠ, ಕುಂತೂರು ಮಠಗಳಲ್ಲಿ ಯಾವಾಗಲಾದರೂ ಈ ಕಾರ್ಯ ಜರುಗಬಹುದು. ದೀಕ್ಷಾ ಕಾರ್ಯ ಗ್ರಾಮಗಳಲ್ಲಿಯೂ ಸಹ ನಡೆಯುತ್ತದೆ. ಆಯಾ ಪ್ರದೇಶಕ್ಕೆ ಪುರಸೇಕಾರಿ ಇರುತ್ತಾನೆ. ಈತನೇ ಗುಡ್ಡರಿಗೆ ದೀಕ್ಷೆ ನೀಡುವಾತ. ಈತ ಮಾಂಸ, ಮದ್ಯ ಸೇವಿಸುವಂತಿಲ್ಲ. ಪುರಸೇಕಾರಿ ಮನೆತನದಲ್ಲಿ ಎಲ್ಲರೂ ಗುಡ್ಡರಾಗಿರಬೇಕು. ಇವರು ಶಿವರಾತ್ರಿಯಲ್ಲಿ ಉಪವಾಸ ಮಾಡುತ್ತಾರೆ. ಬಿಳಿ ಬಟ್ಟೆ ತೊಡುತ್ತಾರೆ. ಇವರು ಗುಡ್ಡರಿಂದ ಕಾಣಿಕೆ ವಸೂಲಿ ಮಾಡಿ ಸಾಲೂರು ಮಠಕ್ಕೆ ತಂದೊಪ್ಪಿಸುತ್ತಾರೆ. ಈ ಕಾಯಕ ಶಿವರಾತ್ರಿ, ದೀಪಾವಳಿ, ಕಾರ್ತಿಕ, ಯುಗಾದಿ, ನವರಾತ್ರಿ ಹಬ್ಬಗಳಲ್ಲಿ ನಡೆಯುತ್ತದೆ. ಆಷಾಢ ಮಾಸದಲ್ಲಿ ಬಿಟ್ಟು ಮಿಕ್ಕೆಲ್ಲ ದಿನಗಳಲ್ಲೂ ಮಾಡುತ್ತಾರೆ. ಊರಿನಲ್ಲಾದರೆ ಊರಿನ ಬಾವಿಯ ಹತ್ತಿರ ಅಥವಾ

ನದಿಯ ಹತ್ತಿರ ಮಾಡುತ್ತಾರೆ. ಈ ಸಮಾರಂಭದ ದಿನ ಮನೆಯನ್ನೆಲ್ಲಾ ಗುಡಿಸಿ, ಸಾರಿಸಿ ತಾವೂ ಮಡಿಯಾಗುತ್ತಾರೆ. ಗುಡ್ಡನಾಗುವ ಹುಡುಗನ ನಡುವಿನಲ್ಲಿರುವ ಉಡುದಾರವನ್ನು ಕಿತ್ತು ಆತನ ತಲೆಯನ್ನು ನುಣ್ಣಗೆ ಬೋಳಿಸಿ ಅವನನ್ನು ಪೂರ್ವ ದಿಕ್ಕಿಗೆ ಮುಖ ಮಾಡಿ ಕುರಿಸಲಾಗುವುದು. ಐದು ಪಾವು ಅಕ್ಕಿ, ಐದು ಪಾವಲಿ, ಒಂದಚ್ಚು ಬೆಲ್ಲ, ಐದು ಬಾಳೆಹಣ್ಣು, ಎಲೆ ಅಡಿಕೆ ಇಷ್ಟನ್ನು ಬೆರೆಸಿ ಒಂದು ವಸ್ತ್ರದ ಮೇಲೆ ಇಟ್ಟು ಪೂಜೆ ಮಾಡಿದ ಮೇಲೆ ಹುಡುಗನಿಗೆ ಮಡಿಲು ತುಂಬುವರು. ಅನಂತರ ಸ್ಥಾನಕ್ಕೆ ನೀರು ಕಾಯಿಸಿದ ಒಲೆ ಮತ್ತು ಹಂಡೆಗಳನ್ನು ಪೂಜಿಸಿ, ಅರಿಶಿಣ ಬೆರೆಸಿದ ಆ ನೀರನ್ನು ಸಮಾರಂಭಕ್ಕೆ ಬಂದ ಬಂಧು ಬಾಂಧವರು ಒಂದೊಂದು ಚೊಂಬಿನಂತೆ ಹುಯ್ದು ಸ್ನಾನ ಮಾಡಿಸುವರು. ಆಗ ಅವರು 'ಮಾದೇವ ನಿನ್ನ ಕಾಯ್ತಾರೋ ಕಂದನ ಉದ್ಧಾರ ಮಾಡಪ್ಪ ' ಎಂದು ಹೇಳುತ್ತಾರೆ. ಅದೇ ಸಮಯಕ್ಕೆ ಗುಡ್ಡರು ಕೂಡ ಕಂಸಾಳೆ ನುಡಿಸುತ್ತಾ,

**ಸ್ನಾನ ಮಾಡಪ್ರೆ –ಮಾದೇವ**
**ಮೀದು ಮಡಿಯ ಉಟ್ಟವರೆ**
**ಶಿವಪೂಜೆಗೆ ಬಂದು ನಿಂತವರೆ**

ಎಂದು ಹಾಡುತ್ತಾರೆ. ಹುಡುಗನಿಗೆ ಸ್ನಾನದ ನಂತರ ಹೊಸ ಬಟ್ಟೆಗಳನ್ನು ತೊಡಿಸಿ ಕೆರೆ, ಕೊಳ ಅಥವಾ ಬಾವಿಯಿಂದ ದೇವರನ್ನು ತರಲು ಹೊರಡುತ್ತಾರೆ. ಐದು ಅರಿಶಿಣ ನೀರು ತುಂಬಿದ ಗಡಿಗೆಗಳು, ಐದು ಜನ ಮುತ್ತೈದೆಯರು ಹೋಗುವವರು. ಗಡಿಗೆಗಳಿಗೆ ನೀರು ತುಂಬಿ ಬಾಯಿಗೆ ಸಿಂಗರಿಸುವರು. ಅವುಗಳ ಜೊತೆಗೆ ನಾಗಬೆತ್ತ, ಉರುಗದಾರ, ಕಂಸಾಳೆ, ರುದ್ರಾಕ್ಷಿಮಣಿ, ದಮ್ಮಡಿ, ಬಟ್ಟುತಾಳ, ವಿಭೂತಿ ಗಟ್ಟಿ ಇಷ್ಟನಿಟ್ಟು ಗುಡ್ಡನ ದೀಕ್ಷೆಯನ್ನು ಪಡೆಯುವ ಹುಡುಗನ ಬೋಳು ತಲೆಯ ತುಂಬಾ ವಿಭೂತಿಯನ್ನು ಬಳಿದು ಕಂಸಾಳೆಗಳನ್ನು ಬಡಿಯುತ್ತಾ ಪೂಜೆ ಸಲ್ಲಿಸುವರು. ನಂತರ ವಾದ್ಯ ಸಮೇತ ದೇವರನ್ನು ಮನೆಗೆ ತಂದು ಗದ್ದುಗೆಯ ಮೇಲೆ ಮೇಲಿರಿಸಲಾಗುವುದು. ಆಗ ಹುಡುಗನ ತಂದೆ ತಾಯಿಗಳು ''ಇವ ನಮ್ಮ ಮಗನಲ್ಲ ಮಾದೇಶ್ವರನ ಮಗ ಒಪ್ಪಿಸಿಕೊಳ್ಳಿ'' ಎನ್ನುವರು. ಪುರುಸೇಕಾರಿಯು ಅವನ ಕೈಹಿಡಿದು ಕರಿಮರದ ಹಸಿಮಣೆಯ ಮೇಲೆ ಪೂರ್ವಾಭಿಮುಖವಾಗಿ ಹಾಕಿದ ಕರಿ ಕಂಬಳಿಯ ಗದ್ದುಗೆಯ ಮೇಲೆ ಕೂರಿಸಿ, ತಲೆ ಹೊಡೆದಂತೆ ಅಕ್ಕಿ ತುಂಬಿ ಇಟ್ಟಿರುವ ಸೇರಿನ ಮೇಲೆ ಹುಡುಗನ ಬಲಗೈಯನ್ನು ಇಟ್ಟು ಹಾಲು, ತುಪ್ಪ, ಬೆಣ್ಣೆಯನ್ನು ಆ ಕೈಗೆ ಸವಾರಿ ಹೂವನ್ನಿಟ್ಟು ಕರ್ಪೂರ ಸಾಮ್ರಾಣಿ ಗಂಧದ ಕಡ್ಡಿಯಿಂದ ಪೂಜೆ ಮಾಡಿದ ನಂತರ ಕೈಯನ್ನು ತೆಗೆಸಿ ಅದನ್ನು ಅವನ ಹಣೆಗೆ ಐದು ಸಾರಿ ಒತ್ತುತ್ತಾನೆ. ಹೀಗೆ ಒತ್ತಿದಾಗ ಅಂಗೈಯಲ್ಲಿ ಅಂಟಿಕೊಂಡಿದ್ದ ಅಕ್ಕಿ ಕಾಳುಗಳು ಹೆಚ್ಚಿನ ಪ್ರಮಾಣದಲ್ಲಿ ಹುಡುಗನ ಹಣೆಗೆ ಅಂಟಿಕೊಂಡಿದ್ದರೆ ಅವನು ಮಾದೇಶ್ವರನ ನೆಚ್ಚಿನ ಶಿಶು

ಮಗನಾಗುತ್ತಾನೆಂದು ನಂಬಿಕೆ. ಅನಂತರ ಐದು ಕೊಂಬುಗಳನ್ನುಳ್ಳ ಅರಿಶಿಣ ಕೊನೆಯೊಂದನ್ನು ಚಿನ್ನ ಬೆಳ್ಳಿಯ ಚೂರುಗಳೊಡನೆ ಅರಿಶಿಣ ಹಚ್ಚಿದ ಬಟ್ಟೆ ಒಂದಕ್ಕೆ ಸುತ್ತಿ ಕರಿ ದಾರದಲ್ಲಿ ಅದನ್ನು ಕಟ್ಟಿ ಪೂಜಿಸಿ ಬಂದವರಿಂದ ಅದಕ್ಕೆ ಶರಣು ಮಾಡಿಸುವರು. ಇದು ಒಂದು ರೀತಿಯ ಕಂಕಣ ಇದ್ದ ಹಾಗೆ. ಈ ಕಂಕಣವನ್ನು " ಅಪ್ಪ ಮಗುವೇ ಇಲ್ಲಿತನಕ ತಾಯಿ ತಂದೆಗಳ ಮಗನಾಗಿದ್ದೆ, ಇಲ್ಲಿಂದೀಚ್ಕೆ ಮಾದಪ್ಪನ ಮಗನಾದಿ " ಎಂದು ಹೇಳುತ್ತಾ ಪುರುಸೇಕಾರಿ ಹುಡುಗನ ಬಲ ಮುಂಗೈಗೆ ಅದನ್ನು ಕಟ್ಟಿದ ನಂತರ " ಮಲೆ ಮಾಯ್ಕಾರ ನನ್ನಪ್ಪಾಜಿ ಮಾದೇವ ಉದ್ಧಾರ ಮಾಡಪ್ಪ" ಎನ್ನುತ್ತಾ ರುದ್ರಾಕ್ಷಿ ಮಣಿಯನ್ನು ಕುತ್ತಿಗೆಗೆ ಕಟ್ಟುತ್ತಾನೆ. ನೆರೆದ ಜನ " ಅಕ್ಷಯವಾಗ್ಲಪ್ಪ " ಎಂದು ಹೇಳುತ್ತಾ ಅಕ್ಷತೆ ಕಾಳುಗಳನ್ನು ಹುಡುಗನ ತಲೆಯ ಮೇಲೆ ಚೆಲ್ಲುತ್ತಾರೆ. ಅನಂತರ ಸಾಂಪ್ರದಾಯಿಕವಾದ ಕೆಲವು ಪ್ರಶ್ನೆಗಳನ್ನು ಕೇಳುವುದು ಮತ್ತು ಹುಡುಗನಿಂದ ಉತ್ತರ ಪಡೆಯುವುದು ನಡೆಯುತ್ತದೆ.

ಪುರುಸೇಕಾರಿ: ನೀನು ಯಾರ ಮಗನಪ್ಪ?

ಹುಡುಗ: ನಾನು ಮಾದೇವನ ಮಗ ಸ್ವಾಮಿ.

ಪುರುಸೇಕಾರಿ: ಹಂಗಾದ್ಮೇಕೆ ತಕ್ಕೊಳಪ್ಪ ಮಾದೇವನ ಜೋಳ್ಗೆಯ – ಎನ್ನುತ್ತಾ ಹುಡುಗನ ಕಂಕುಳಿಗೆ ಜೋಳಿಗೆಯನ್ನು, ಕೈಗೆ ನಾಗಬೆತ್ತವನ್ನು ಕೊಡುತ್ತಾನೆ.

ಪುರುಸೇಕಾರಿ: ಇದೇನ್ ಮಾಡಿಯಪ್ಪ?

ಹುಡುಗ : ಸ್ವಾಮಿ ನಾಕಾರ್ ಮನೆ ಭಿಕ್ಷಾಮಾಡ್ಕೊಂಡು ಸ್ವಾಮಾರ, ಸುಕ್ರಾರ ಇದನ್ನ ಮಡಿಗಿ ಪೂಜೆ ಮಾಡ್ತೀನಿ.

ಪು: ಏನಪ್ಪಾ ನಿಶ್ಚಯವಾಗ್ಲೂ ಮಾಡ್ತೀಯ?

ಹು: ಸ್ವಾಮಿ ನಿಶ್ಚಯವಾಗ್ಲೂ ಮಾಡ್ತೀನಿ.

ಪು: ಹಂಗಾದ್ಮ್ಯಕೆ ಈ ದುರುಣರು ಬಂದವ್ರಲ್ಲ ಅವುರ್ಗೆಲ್ಲ ಹೇಳ್ದಂಗೆ ನಡ್ಕೋತೀನಿ ಅಂತ್ಹೇಳಿ ಅವರ ಪಾದಕ್ಕೆ ಬೀಳಪ್ಪ.

ಹೀಗೆ ಹೇಳಿದೊಡನೆ ಆ ಹುಡುಗ(ಹೊಸಗುಡ್ಡ) ಮೊದಲು ಪುರುಸೇಕಾರಿಗೆ ಶರಣು ಮಾಡಿ ಬಳಿಕ ಅಲ್ಲಿ ನಿಂತಿರುವ ಇತರೆ ಗುಡ್ಡರಿಗೆ ಪಾದ ಮುಟ್ಟಿ ನಮಸ್ಕರಿಸುತ್ತಾನೆ. ನಿಮ್ಮ ಪಾದ ಸಾಕ್ಷಿಯಾಗಿ ಹೇಳ್ದಂಗೆ ನಡ್ಕೋತೀನಿ ಎನ್ನುತ್ತಾನೆ. ಅದಕ್ಕೆ ಅವರು ಸ್ವಮಾರ, ಸುಕ್ರಾರ ತಪ್ದೆ ಕ್ವಾರಣ್ಯ ಮಾಡ್ತೀಯೆನಪ್ಪಾ? ಎಂದಾಗ ಹುಡುಗ ಮಾಡ್ತೀನಿ ಸ್ವಾಮಿ ಎಂದು ಉತ್ತರಿಸುತ್ತಾನೆ. ಈ ಸಂದರ್ಭದಲ್ಲೆಲ್ಲಾ ದೇವರ ಗುಡ್ಡರು ಹಾಡುತ್ತಾರೆ.

ಅನಂತರ ಕೋರಣ್ಯಕ್ಕೆ ಹೋಗುವ ಕಾರ್ಯವಿರುತ್ತದೆ. ಹೊಸ ಗುಡ್ಡನನ್ನು ಮುಂದೆ ಬಿಟ್ಟುಕೊಂಡು ಉಳಿದ ಗುಡ್ಡರೆಲ್ಲ ಕಂಸಾಳೆಯನ್ನು ಬಾರಿಸುತ್ತಾ ಹಾಡುತ್ತಾ ಕ್ವಾರಣ್ಯಕ್ಕೆ ಹೊರಡುತ್ತಾರೆ. ಅಂಕದ ಬಾಗಿಲಲ್ಲಿ ಗುಡ್ಡನನ್ನು ನಿಲ್ಲಿಸಿ ಅವನ ತಂದೆ ತಾಯಿಗಳು ಪಾದಗಳನ್ನು ತೊಳೆದು ಪೂಜಿಸಿ ನಮಸ್ಕರಿಸಿ ಐದು ಸೇರು ಅಕ್ಕಿ, ಒಂದಚ್ಚು ಬೆಲ್ಲ, ಒಂದು ತೆಂಗಿನ ಕಾಯಿ, ಬಾಳೆ ಹಣ್ಣುಗಳನ್ನು ಗುಡ್ಡನ ಜೋಳಿಗೆಗೆ ಹಾಕುವರು. ಹೀಗೆ ನಾಲ್ಕಾರು ಮನೆಗಳಲ್ಲಿ ಭಿಕ್ಷಾಟನೆ ನಡೆಯುತ್ತದೆ. ಭಿಕ್ಷಾಟನೆಯಿಂದ ಹಿಂದಿರುಗಿದಾಗ ಹೊಸ ಗುಡ್ಡನನ್ನು ಬಾಗಿಲಲ್ಲೇ ನಿಲ್ಲಿಸಿ ಪಾದಗಳನ್ನು ತೊಳೆದು, ಆರತಿ ಬೆಳಗುತ್ತಾರೆ. ಆಮೇಲೆ ಭಿಕ್ಷೆಯ ಜೋಳಿಗೆ ಮತ್ತು ಕಂಸಾಳೆ ಇತ್ಯಾದಿ ಬಿರುದುಗಳನ್ನು ಗದ್ದುಗೆಯ ಮೇಲಿಟ್ಟು, ಹುಡುಗನ ಕೈಯನ್ನು ಮತ್ತೆ ತಲೆ ಸವರಿದಂತೆ ತುಂಬಿದ ಅಕ್ಕಿಯ ಸೇರಿನ ಮೇಲೆ ಇರಿಸಿ ಪುರಸೇಕಾರಿ ಕಂಕಣ ಬಿಚ್ಚುತ್ತಾನೆ. ಆ ಕಂಕಣವನ್ನು ಅರಣೆಗಡಿಗೆಯ ಹೊಂಬಾಳೆಯ ಜೊತೆ ಸೇರಿಸಿ ಕಟ್ಟಿ ಸೂರಿಗೆ ಬಿಗಿದು ಧೂಪ ಹಾಕುತ್ತಾರೆ. ಅನಂತರ ಗದ್ದುಗೆ ಪೂಜೆ ನಡೆಯುತ್ತದೆ. ಎಲ್ಲರೂ ಎಲ್ಲರಿಗೂ ಸಿಹಿ ಊಟವನ್ನು ಬಡಿಸಲಾಗುತ್ತದೆ. ಹಳೆಯ ಗುಡ್ಡರು ಹೊಸ ಗುಡ್ಡನ ಅಗಲಿಗೆ, ತಮ್ಮ ಅಗಲಿನಲ್ಲಿರುವ ಸಿಹಿಯನ್ನು ಒಂದು ಹಿಡಿ ಆಗುತ್ತಾರೆ. ಇದಕ್ಕೆ ಪಂತಿಸೇವೆ ಎಂದು ಹೆಸರು. ಊಟ ಮುಗಿದ ನಂತರ ಹೊಸ ಗುಡ್ಡನ ಜೋಳಿಗೆಯಲ್ಲಿದ್ದ ಭಿಕ್ಷೆಯನ್ನು ಸುರಿದು ಕಾಲೇಜುಗೆ ಐದು ಬೊಗಸೆ ಅಕ್ಕಿ ಮತ್ತು ಐದು ಪಾವಲಿಗಳನ್ನು ಹಾಕಿ 'ಅಕ್ಷಯವಾಗ್ಲಪ್ಪ' ಎಂದು ಅರಸಿ ತಮ್ಮ ತಮ್ಮ ಸ್ಥಳಗಳಿಗೆ ಹಿಂದಿರುಗುತ್ತಾರೆ.

ಇನ್ನು ಮುಂದೆ ಹೊಸ ಗುಡ್ಡನಿಗೆ ಮಾದೇಶ್ವರನ ಕಥೆಯನ್ನು ಕಲಿತು ಹಾಡುತ್ತಾ ಭಿಕ್ಷೆ ಮಾಡುವುದೇ ಕಾಯಕ. ಒಂದು ಸೋಮವಾರ ಈತನಿಗೆ ಕಥೆ ಕಲಿಸುವ ಶಾಸ್ತ್ರವಿರುತ್ತದೆ. ಆತನರಾಗ ಇಂಪಾಗಿರದಿದ್ದರೆ, ಕಥೆಯನ್ನು ಹಾಡಲು ಆತ ಸಮರ್ಥ ಇಲ್ಲದಿದ್ದರೆ ಸೊಲ್ಲು ನುಡಿಸುವುದಕ್ಕೆ ಅಥವಾ ದಮಡಿ ಬಾರಿಸುವುದಕ್ಕೆ ನೇಮಕವಾಗುತ್ತಾನೆ. ಇವೆಲ್ಲವೂ ಗುರುವಿನ ಮೂಲಕ ಗುಡ್ಡನಿಗೆ ಪ್ರಾಪ್ತವಾಗುತ್ತದೆ. ಪ್ರತಿ ಸೋಮವಾರ ಮತ್ತು ಶುಕ್ರವಾರ ಗುಡ್ಡ ಮಾದೇಶ್ವರನನ್ನು ಪೂಜಿಸಿ ಭಿಕ್ಷೆಗೆ ಹೋಗಬೇಕು. ಈ ಸಂದರ್ಭದಲ್ಲಿ ಆತ ಕಥೆ ಮಾಡಬೇಕು. ಇಲ್ಲದಿದ್ದರೆ ಬಿಡೋಲಗ ಅಥವಾ ಕಟ್ಟೋಲಗ ಎಂದು ಕೆಲವು ಬಿಡಿ ಗೀತೆಗಳು ಹಾಡಬೇಕು. ಹರಿಜನ ಜಾತಿಯವರಲ್ಲಿ ಗುಡ್ಡಿ ಎಂಬುದಾಗಿ ಹೆಣ್ಣು ಮಕ್ಕಳಿಗೆ ದೀಕ್ಷೆ ಕೊಡುವ ಪದ್ಧತಿ ಅಲ್ಲಲ್ಲಿ ಇದೆ. ಆಕೆ ಗುಡ್ಡಿಯಾದ ಮೇಲೆ ಮದುವೆಯಾಗುವಂತಿಲ್ಲ. ಗುಡ್ಡಿಯರಿಗೆ ಮಾದಮ್ಮ, ಮಾದೇವಿ, ರಾಮವ್ವ, ಮಲ್ಲಮ್ಮ ಮುಂತಾದ ಹೆಸರುಗಳನ್ನಿಡುತ್ತಾರೆ. ಈಚೆಗೆ ಹೆಣ್ಣುಮಕ್ಕಳನ್ನು ಗುಡ್ಡಿ ಬಿಡುವ ಪದ್ಧತಿ ಕಣ್ಮರೆಯಾಗುತ್ತಿದೆ.

ದೀಕ್ಷೆ ನೀಡುವಾಗ ಗುಡ್ಡನಿಗೆ ಕೆಲವು ಎಚ್ಚರಿಕೆಗಳನ್ನು ನೀಡಲಾಗುತ್ತದೆ. ಮದ್ಯ, ಮಾಂಸ ಸೇವನೆ ಮಾಡಬಾರದು. ವ್ಯಭಿಚಾರವನ್ನು ಮಾಡಬಾರದು. ಸುಳ್ಳು ಮೋಸ

ವಂಚನೆ ಮಾಡಬಾರದು. ಗುರು ಹಿರಿಯರಿಗೆ ಗೌರವ ನೀಡಬೇಕು. ತಂದೆ ತಾಯಿಯನ್ನು ಸಾಕಬೇಕು. ಮತ್ತೊಬ್ಬರ ಎಂಜಲು ತಿನ್ನಬಾರದು. ಜಗಳ, ಗಲಭೆಗಳಿರುವ ಜಾಗಕ್ಕೆ ಹೋಗಬಾರದು. ಸೋಮವಾರ ಶುಕ್ರವಾರ ಜೋಳಿಗೆ ಕಂಸಾಳೆಯನ್ನಿಟ್ಟು ಪೂಜಿಸಬೇಕು. ಹಿರಿಯ ಗುಡ್ಡರನ್ನು ಕಂಡಾಗ ಶರಣು ಎನ್ನಬೇಕು. ಸದಾ ಗುಡ್ಡ ಮಣಿಯನ್ನು ಧರಿಸಿರಬೇಕು. ಇದೇ ಮೊದಲಾದ ಆದರ್ಶಪ್ರಾಯ ಜೀವನ ಶೈಲಿಯನ್ನು ರೂಢಿಸಿಕೊಳ್ಳಲು ತಿಳಿಸಲಾಗುತ್ತದೆ.

**ಗುಡ್ಡನ ನಿಯಮ ಉಲ್ಲಂಘನೆ ವಿಚಾರಣೆ:**

ದೇವರಗುಡ್ಡನು ತನಗೆ ದೀಕ್ಷೆ ನೀಡುವಾಗ ಹೇಳಿದ ನಿಯಮಗಳನ್ನು ಪಾಲಿಸದಿದ್ದರೆ, ಅದನ್ನು ಗಮನಿಸಿದ ಇತರ ಗುಡ್ಡರು ಅಥವಾ ಅವನ ಮನೆಯವರು ಸಾಲೂರು ಮಠಕ್ಕೆ ಅಥವಾ ಅಲ್ಲಿನ ಪುರುಸೇಕಾರಿಗೆ ತಿಳಿಸಬೇಕು. ಆಗ ಅವನನ್ನು ಕರೆಸಿ ವಿಚಾರಣೆ ನಡೆಸಲಾಗುತ್ತದೆ. ನಿಯಮಗಳನ್ನು ಉಲ್ಲಂಘಿಸಿದ ಗುಡ್ಡನು ಅವುಗಳನ್ನು ಒಪ್ಪಿಕೊಂಡು ಇನ್ನೊಮ್ಮೆ ಈ ರೀತಿ ನಡೆದುಕೊಳ್ಳುವುದಿಲ್ಲ ಎಂದು ಕ್ಷಮೆಯಾಚಿಸಿದರೆ ಅವನಿಂದ ತಪ್ಪೊಪ್ಪಿಗೆಯ ಕಾಣಿಕೆ ಪಡೆದು ಕ್ಷಮಾಪಣೆ ನೀಡಲಾಗುತ್ತದೆ. ಕ್ಷಮಾಪಣೆ ನೀಡಿ ಎಚ್ಚರಿಕೆ ನೀಡಿದ ನಂತರವೂ ಅದೇ ತಪ್ಪುಗಳನ್ನು ಅವನು ಮಾಡುತ್ತಿದ್ದರೆ ಮತ್ತೆ ಅವನನ್ನು ಕರೆಸಿ ವಿಚಾರಣೆ ನಡೆಸಲಾಗುತ್ತದೆ. ಅವನು ನಿಯಮಗಳನ್ನು ಪಾಲಿಸುವುದಿಲ್ಲ ಎಂಬುದು ತಿಳಿದ ಮೇಲೆ ಅವನಿಂದ ಗುಡ್ಡ ಮಣಿಯನ್ನು ಹಿಂಪಡೆಯಲಾಗುತ್ತದೆ ಅಥವಾ ಮಾದೇಶ್ವರನ ಇಚ್ಛೆಯಂತೆ ಆಗಲಿ ಎಂದು ಅವನ ಪಾಡಿಗೆ ಅವನನ್ನು ಬಿಟ್ಟು ಬಿಡಲಾಗುತ್ತದೆ.

**ಪರಾಮರ್ಶನ ಗ್ರಂಥಗಳು:**

1. ಅಂಬೇಡ್ಕರ್ ಬಿ.ಆರ್., (2021), ಡಾ. ಬಾಬಾ ಸಾಹೇಬ್ ಅಂಬೇಡ್ಕರ್ ರವರ ಸಮಗ್ರ ಬರಹಗಳು ಮತ್ತು ಭಾಷಣಗಳು: ಸಂಪುಟ–10, ಕುವೆಂಪು ಭಾಷಾ ಭಾರತಿ ಪ್ರಾಧಿಕಾರ, ಬೆಂಗಳೂರು.
2. ರಾಜರತ್ನಂ ಜಿ.ಪಿ., (2007) ಗೌತಮ ಬದ್ಧ, ಸ್ವಪ್ನ ಬುಕ್ ಹೌಸ್, ಬೆಂಗಳೂರು.
3. ವೆಂಕಟೇಶ್ ಇಂದ್ವಾಡಿ ರಾ. (ಸಂ), (2008), ಮಲೆಯ ಮಾದಪ್ಪನ ಮಹಾಕಾವ್ಯ ಸಾಂಸ್ಕೃತಿಕ ಮುಖಾಮುಖಿ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.
4. ಸ್ವಾಮಿ ಬಿ.ಎಸ್., (2008), ಮಲೆಯ ಮಾದೇಶ್ವರ ಮಹಾಸಂಪುಟ, ಕಿರಣ್ ಎಂಟರ್ ಪ್ರೈಸಸ್, ಬೆಂಗಳೂರು.
5. ಚಂದ್ರಶೇಖರ ಕಂಬಾರ (ಸಂ), (2021), ಜಾನಪದ ವಿಶ್ವಕೋಶ: ಸಂಪುಟ–2, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು.

**Funding:**

This study was not funded by any grant.

**Conflict of interest:**

The Authors have no conflict of interest to declare that they are relevant to the content of this article.

**About the License:**

© The Authors 2024. The text of this article is open access and licensed under a Creative Commons Attribution 4.0 International License.